ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	~~1790~~ 1561 (1790)
ಸದಸ್ಯರ ಹೆಸರು	:	ಶ್ರೀಮತಿ ಎಸ್ ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	24-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯ ಮಡಿಕೇರಿ ನಗರಸಭೆ ತ್ಯಾಜ್ಯ ಸಂಸ್ಕರಣಾ ಘಟಕದ ತ್ಯಾಜ್ಯವನ್ನು ಉಪಯೋಗಿಸಿಕೊಂಡು Waste to Energy ತಂತ್ರಜ್ಞಾನ ಬಳಸಿ ವಿದ್ಯುತ್ ಉತ್ಪಾದನೆ ಮಾಡಲು Public-Private partnership ಮಾಡೆಲ್ ನಡಿ ಖಾಸಗಿ ಕಂಪನಿಗಳು ಮುಂದೆ ಬಂದರೆ ಸರ್ಕಾರ ಅವಕಾಶ ಮಾಡಿಕೊಡುವುದೇ? (ಸಂಪೂರ್ಣ ವಿವರ ನೀಡುವುದು)	• ಘನತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳು 2016ರ ರೀತ್ಯಾ ನಗರಸ್ಥಳಿಯ ಸಂಸ್ಥೆಗಳು ಮೂಲದಲ್ಲಿಯೇ ಹಸಿ ಹಾಗು ಒಣ ತ್ಯಾಜ್ಯವನ್ನಾಗಿ ಬೇರ್ಪಡಿಸಿ ಸಂಗ್ರಹಿಸಿದ ನಂತರ ಪುನರ್‌ಪಡೆಯಲಾಗದ (Non-Recyclable) ದಹನಯೋಗ್ಯವಾದ ತ್ಯಾಜ್ಯವನ್ನು (calorific value of >1500 K/cal/kg) ಒಗ್ಗೂಡಿಸಿ ವಿದ್ಯುತ್ ಉತ್ಪಾದಿಸುವ ಘಟಕಗಳಿಗೆ ಉಪಯೋಗಿಸಬಹುದಾಗಿರುತ್ತದೆ. • SWM Rules 2016 ರನ್ವಯ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ತಂತ್ರಜ್ಞಾನ ಅಳವಡಿಸಿಕೊಳ್ಳಲು ನಗರ ಪ್ರದೇಶಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯದಲ್ಲಿ 1500 Kcal/kg ರಷ್ಟು calorific value ಇರಬೇಕಿರುತ್ತದೆ. • ಇದಲ್ಲದೆ ಡಾ॥ ಕೆ.ಕಸ್ತೂರಿ ರಂಗನ್, ರವರ ಅಧ್ಯಕ್ಷತೆಯಲ್ಲಿ ಪೌರ ಘನತ್ಯಾಜ್ಯ ವಸ್ತುವನ್ನು ಸಂಸ್ಕರಿಸಲು ತಾಂತ್ರಿಕವಾಗಿ ಕಾರ್ಯಸಾಧ್ಯವಾದ, ಆರ್ಥಿವಾಗಿ ಕೈಗೆಟಕುವ ಹಾಗೂ ಪರಿಸರಕ್ಕೆ ಹಾನಿಯಾಗದ ತಂತ್ರಜ್ಞಾನಗಳನ್ನು ಗುರುತಿಸಲು ಕೇಂದ್ರ ಯೋಜನಾ ಆಯೋಗವು "Waste to Energy" ಕಾರ್ಯ ಪಡೆಯನ್ನು ರಚಿಸಿತ್ತು, ಸದರಿ ಕಾರ್ಯ ಪಡೆಯು ಸಲ್ಲಿಸಿರುವ ವರದಿಯನುಸಾರ ಸುಸ್ಥಿರ "Waste to Energy" ಸೌಲಭ್ಯವನ್ನು ಅಭಿವೃದ್ಧಿ ಪಡಿಸಲು ಕನಿಷ್ಟ 300 ಟನ್ ಗಳಷ್ಟು ಪುನರ್ ಬಳಕೆಯಾಗದ ದಹನ ಯೋಗ್ಯ ತ್ಯಾಜ್ಯ ವಸ್ತುಗಳ ಅವಶ್ಯಕತೆಯಿರುತ್ತದೆ. • ಕೊಡಗು ಜಿಲ್ಲೆಯ ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿ ಪ್ರತಿನಿತ್ಯ 25 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ನಗರದಲ್ಲಿ ಸಂಗ್ರಹವಾಗುವ ತ್ಯಾಜ್ಯದ calorific value 180 Kcal/kg ಇದ್ದು, ದಹನಯೋಗ್ಯ ತ್ಯಾಜ್ಯವಸ್ತುಗಳು ಸಹ ಕಡಿಮೆ ಪ್ರಮಾದಲ್ಲಿರುತ್ತದೆ. ಈ ಕಾರಣದಿಂದಾಗಿ Waste to Energy ತಂತ್ರಜ್ಞಾನವು ಮಡಿಕೇರಿ ನಗರಸಭೆಗೆ ಸೂಕ್ತವಿರುವುದಿಲ್ಲ.

ಆ)	ಅವಕಾಶವಿದ್ದಲ್ಲಿ, ಈ ಸಂಬಂಧ ರೂಪಿಸಿರುವ ನೀತಿ, ನಿಯಮಗಳು ಹಾಗೂ ಮಾನದಂಡಗಳೇನಯ ಹಾಗೂ ಈ ರೀತಿಯ ಸಹಭಾಗಿತ್ವಕ್ಕೆ ಒಳಪಡುವ ಖಾಸಗಿ ಸಂಸ್ಥೆಗಳಗೆ ಸರ್ಕಾರದಿಂದ ದೊರೆಯುವ ಸೌಲಭ್ಯ ಸವಲತ್ತುಗಳು ಹಾಗೂ ಭೂಮಿ ನೀಡುವಿಕೆ ಹಾಗೂ ಹಣಕಾಸು ಸೌಲಭ್ಯಗಳೇನು? (ಸಂಪೂರ್ಣ ವಿವರ ನೀಡುವುದು)	• ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ತಂತ್ರಜ್ಞಾನ Incineration (ದಹನಕುಂಡ) ವಿಧಾನ ಸೇರಿದಂತೆ ಇತರೆ ತಂತ್ರಜ್ಞಾನಗಳಾದ ಗ್ಯಾಸಿಫಿಕೇಷನ್, ಪ್ಲಾಸ್ಮಾ, ಪೈರೋಲಿಸಿಸ್ ಮುಂತಾದ ತಂತ್ರಜ್ಞಾನಗಳನ್ನು ಬಳಸಿ ಘನತ್ಯಾಜ್ಯ ವಸ್ತುಗಳಂದ ವಿದ್ಯುತ್ ಉತ್ಪಾದಿಸುವ ಯಾವುದೇ ಯೋಜನೆಗಳು ಭಾರತ ದೇಶದಲ್ಲಿ ಯಶಸ್ವಿಯಾಗಿ ಕಾರ್ಯಗತಗೊಂಡು, ಸುಸ್ಥಿರವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಉದಾಹರಣೆಗಳಿರುವುದಿಲ್ಲ. • ಬೆಂಗಳೂರು ನಗರವನ್ನು ಹೊರತುಪಡಿಸಿ, ಯಾವುದೇ ನಗರದಲ್ಲಿ Standalone waste to energy ಘಟಕವನ್ನು ಅಭಿವೃದ್ಧಿ ಪಡಿಸುವುದು ಸೂಕ್ತವಿರುವುದಿಲ್ಲ ಆದುದರಿಂದ ರಾಜ್ಯದಲ್ಲಿ ವಿಭಾಗೀಯ ಮಟ್ಟದಲ್ಲಿ ಸದರಿ ತಂತ್ರಜ್ಞಾನ ಅಳವಡಿಸಿಕೊಳ್ಳವ ನಿಟ್ಟಿನಲ್ಲಿ ಸರ್ಕಾರದ ವತಿಯಿಂದ ಕಾರ್ಯಸಾಧ್ಯತಾ ವಿಶ್ಲೇಷಣೆಯನ್ನು ನಡೆಸುವ ಕಾರ್ಯ ಪ್ರಗತಿಯಲ್ಲಿದೆ. • ಕಾರ್ಯಸಾಧ್ಯ Waste to Energy ಘಟಕಗಳಗೆ ಸ್ವಚ್ಛ ಭಾರತ ಮಿಷನ್ ಮಾರ್ಗಸೂಚಿಗಳಂತೆ ಯೋಜನಾ ವೆಚ್ಚದ ಶೇ 35 ರಷ್ಟು Viability gap funding ನ್ನು ನೀಡಲು ಅವಕಾಶವಿರುತ್ತದೆ.

ಸಂಖ್ಯೆ: ನಅಇ 111 ಸಿಎಸ್ಎಸ್ 2020

(ನಾರಾಯಣ ಗೌಡ)
ಪೌರಾಡಳತ ಹಾಗೂ
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.